ಸಿ.ಸಿ.ನಂ.**51/2015**
ಪ್ರಾ.ಸಾ.**1**, ಚಾ.ಸಾ.**2**

ದಿನಾಂಕಃ**04.08.2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು ಃ ಆರೋಪಿತರ ಪರವಾಗಿ ಶ್ರೀ ಬಿ.ಆರ್.ವಕೀಲರಿಂದಃ</u>

ನನ್ನ ತಂದೆ ಚಾಸಾ-**1** ರವರು ವ್ಯವಸಾಯ ಮಾಡುತ್ತಿದ್ದರು. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸ ಇರಲಿಲ್ಲ ಎಂದರೆ, ಸಾಕ್ಷಿಯು ಮರ ಕೊಯ್ಯುವ ಕೆಲಸವನ್ನು ಸಹ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದೂರಿನಲ್ಲಿ ಚಾಸಾ-**1** ರವರು ಏನು ಕೆಲಸ ಮಾಡುತ್ತಿರುತ್ತಾರೆ ಎಂದು ಬರೆಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರ ಎಂದರೆ, ಸಾಕ್ಷಿಯು ವ್ಯವಸಾಯ ಎಂದು ಬರೆದಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಚಾಸಾ-**1** ರವರು ತಾನು ಮರ ಕೊಯ್ಯುವ ಕೆಲಸ ಮಾಡುತ್ತೇನೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ.

ಚಾಸಾ-**1** ರವರು **2019** ರಲ್ಲಿ ಮೃತಪಟ್ಟಿರುತ್ತಾರೆ. **2013** ರಲ್ಲಿ ನಿಮ್ಮ ಮೃತಪಟ್ಟಿರುವ ಕುರಿತು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೀರ ಎಂದರೆ, ಸಾಕ್ಷಿಯು ಹೇಳಿರುವುದು ನೆನಪಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಒಟ್ಟು **4** ಜನ ಗಂಡು ಮಕ್ಕಳು. ಅವರಲ್ಲಿ ಒಬ್ಬರು ಮೃತಪಟ್ಟಿರುತ್ತಾರೆ. ಅವರಲ್ಲಿ **1** ನೇ ಆರೋಪಿ ಹಿರಿಯ ಮಗನಾಗಿರುತ್ತಾರೆ. **1** ನೇ ಆರೋಪಿಯು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. **1** ನೇ ಆರೋಪಿ ಆರೋಗ್ಯ ಇಲಾಖೆಗೆ ಯಾವಾಗ ಕೆಲಸ ಸೇರಿಕೊಂಡಿರುತ್ತಾರೆ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಎಂ.ಎಸ್.ಸಿ., ಬಿ.ಇಡಿ., ವ್ಯಾಸಂಗ ಮಾಡಿರುತ್ತೇನೆ. ನಾನು **2003** ನೇ ಇಸವಿಯಿಂದ ನಾನು ಕಡೂರಿನಲ್ಲಿ ವಾಸವಾಗಿರುತ್ತೇನೆ. ಅದಕ್ಕಿಂತ ಹಿಂದೆನಾನು ನನ್ನ ತಂದೆ-ತಾಯಿ ಮನೆಯಲ್ಲಿ ಚಿಕ್ಕಬಾಸೂರು ಗ್ರಾಮದಲ್ಲಿ ವಾಸವಾಗಿದ್ದೆನು. ನಿಮ್ಮ ತಂದೆಯವರ ಕುಟುಂಬದ ಮೊದಲಿನಿಂದಲೂ ಕೃಷಿಕರ

ಕುಟುಂಬ ಎಂದರೆ ಸರಿ. ನಿಮ್ಮ ತಂದೆಯವರು ಬದಕಿದ್ದಾಗ ವಿಭಾಗ ಆಗಿರುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಿಭಾಗ ಆಗದೇ ಇರುವ ಕಾರಣ ಕುಟುಂಬದ ಆಸ್ತಿಗಳು ಒಟ್ಟು ಕುಟುಂಬದಲ್ಲೇ ಮುಂದುವರಿಯುತ್ತಿರುತ್ತವೆ ಎಂದರೆಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರಿದು 1 ನೇ ಆರೋಪಿಯನ್ನು ನನ್ನ ತಂದೆ ಹಾಗೂ ಊರಿನ ಗ್ರಾಮಸ್ಥರು ಹಲವಾರು ವಿಭಾಗಕ್ಕೆ ಕರೆದರೂ ಸಹ 1 ನೇ ಆರೋಪಿ ನನ್ನ ತಂದೆಗೆ ನಿನ್ನ ಆಸ್ತಿಯನ್ನು ನೀನು ಏನು ಬೇಕಾದರು ಮಾಡಿಕೋ ಎಂದು ಹೇಳಿದ್ದು, ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾದ ಕಾರಣ ಸ್ವಲ್ಪ ಆಸ್ತಿಯನ್ನು ನನಗೆ ಮತ್ತು ಸ್ವಲ್ಪ ಆಸ್ತಿಯನ್ನು ನನ್ನ 2 ನೇ ಅಣ್ಣನಿಗೆ, ನನ್ನ ಮಗನಿಗೆ ಮತ್ತು ನನ್ನ 2 ನೇ ಅಣ್ಣನ ಮಗನಿಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಬಿಳುವಾಲ, ಆಲದಹಳ್ಳಿ ಹಾಗೂ ಕುರುಬರಹಳ್ಳಿ ಗ್ರಾಮಗಳಲ್ಲಿರುವ ಆಸ್ತಿಗಳು ವಿಭಾಗದ ಮೂಲಕ ಬಂದಿರುವ ಹಾಗೆ ಖಾತೆ ಇರುತ್ತದೆ ಎಂದರೆ, ಸಾಕ್ಷಿಯು ನನ್ನ ತಂದೆ ಹಾಗೂ 1 ನೇ ಆರೋಪಿ 2 ನೇಅಣ್ಣನಿಗೆ ಆಸ್ತಿ ಭಾಗ ಕೊಡುವಾಗ ನಾನು ಪದವಿ ವ್ಯಾಸಂಗ ಮಾಡುತ್ತಿದ್ದೆ. ಆಗ ನನ್ನನ್ನು ಕರೆದಿರುವುದಿಲ್ಲ ಎಂದು ನುಡಿದು ಸಾಕ್ಷಿಯು ನಮ್ಮ ಕುಟುಂಬಕ್ಕೆ ಪೂರ್ವಜರಿಂದ ಬಂದ ಯಾವುದೇ ಆಸ್ತಿಗಳು ಇರಲಿಲ್ಲ ಎಂದು ನುಡಿಯುತ್ತಾರೆ.

ಈ ಪ್ರಕರಣದಲ್ಲಿ ಹೇಳಿರುವ ಆಸ್ತಿಗಳನ್ನು ಒಳಗೊಂಡಂತೆ ಒಟ್ಟು 20 ಎಕರೆ ಜಮೀನು, ಊರಿನಲ್ಲಿ ಎರಡು ಮನೆಗಳು ಹಾಗೂ ಎರಡು ನಿವೇಶನಗಳು ಇರುತ್ತವೆ ಎಂದು ನುಡಿಯುತ್ತಾರೆ. ಕಡೂರಿನಲ್ಲಿ ಒಟ್ಟು 10 ಮನೆಗಳು ಇರುತ್ತವೆ, ಅವುಗಳಲ್ಲಿ ಮುಂದೆ 5 ಮನೆಗಳು ಹಾಗೂ ಹಿಂದೆ 5 ಮನೆಗಳು ಇರುತ್ತವೆ. ಸಾಕ್ಷಿಯು ಸ್ವತಃ ಮುಂದುವರಿದು ಮುಂದೆ ಎರಡೂವರೆ ಮನೆಗಳು ಹಾಗೂ ಹಿಂದೆ ಎರಡೂವರೆ ಮನೆಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ 10 ಮನೆಗಳು ಎಲ್ಲವೂ ಸಹ ನಿಮ್ಮ ತಂದೆಯವರ ಹೆಸರಿನಲ್ಲಿ ಖಾತೆ ಇರುತ್ತದೆಯೇ ಎಂದರೆ, ಸಾಕ್ಷಿಯು ಮುಂದೆ ಎರಡೂವರೆ ಮನೆಗಳು ಹಾಗೂ ಹಿಂದೆ ಎರಡೂವರೆ ಮನೆಗಳು ನನ್ನ ತಂದೆಯ ಹೆಸರಿನಲ್ಲಿರುತ್ತದೆ

ಎಂದು ನುಡಿಯುತ್ತಾರೆ. ಸದರಿ ಮನೆಗಳ ಅಸೆಸ್ಮೆಂಟ್ ಸಂಖ್ಯೆ ಏನು ಎಂದರೆ, ಸಾಕ್ಷಿಯು ಹಳೆಯ ಅಸೆಸ್ಮೆಂಟ್ ನಂ.3862/2, ಈಗಿನ ಹೊಸ ಅಸೆಸ್ಮೆಂಟ್ ನಂ.2165/2468 ಮತ್ತು 2614/2467 ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಯು ಕಾಲವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು